**ಸಾಕ್ಷಿಯನ್ನು ದಿನಾಂಕಃ 0.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಜಿ.ಎನ್.ಎನ್. ವಕೀಲರಿಂದಃ**

ದಾವಾ ಆಸ್ತಿಯು ಸರ್ಕಾರದಿಂದ ಸಾಗುವಳಿ ಮೂಲಕ ಮಂಜೂರಾದಂತಹ ಆಸ್ತಿ ಎಂದರೆ ಸರಿ. ಕ್ರಯಕ್ಕೆ ಆಸ್ತಿಯನ್ನು ಕೊಳ್ಳುವ ಮೊದಲು ಏನೆಲ್ಲಾ ದಾಖಲೆಗಳನ್ನು ನೋಡಬೇಕೆಂಬ ಸಾಮಾನ್ಯ ಜ್ಞಾನ ನನಗೆ ಇದೆ ಎಂದರೆ ಸಾಕ್ಷಿಯು ಕ್ರಯ ಪತ್ರ ಮಾಡಿಕೊಳ್ಳುವ ಸಮಯಕ್ಕೆ ದಾಖಲೆಗಳನ್ನು ಒದಗಿಸಿಕೊಡುತ್ತೇನೆಂದು ಪ್ರತಿವಾದಿಯರು ಹೇಳಿದ್ದರು ಎಂದು ನುಡಿಯುತ್ತಾರೆ. ಸರ್ಕಾರದಿಂದ ಮಂಜೂರಾದ ಆಸ್ತಿಯನ್ನು ಮಾರಾಟ ಮಾಡಬೇಕಾದರೆ ತಾಲ್ಲೋಕು ದಂಡಾಧಿಕಾರಿ ಅಥವಾ ಜಿಲ್ಲಾಧಿಕಾರಿಯಿಂದ ಅನುಮತಿ ಪಡೆಯಬೇಕಾಗುತ್ತದೆಂದರೆ ಸಾಕ್ಷಿಯು 15 ವರ್ಷ ತುಂಬಿದ ನಂತರ ಮಾರಾಟ ಮಾಡಬಹುದೆಂದು ನುಡಿಯುತ್ತಾರೆ. ದಾವಾ ಆಸ್ತಿಯು ದುರಸ್ತ್ ಆಗಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಮಕ್ಕಳೆಲ್ಲಾ ಕ್ರಯ ಕರಾರು ಪತ್ರಕ್ಕೆ ಸಹಿ ಮಾಡಿರುತ್ತಾರಾ ಎಂದರೆ ಸಾಕ್ಷಿಯು ಪ್ರತಿವಾದಿ 2 ಮತ್ತು 3 ಸಹಿ ಮಾಡಿರುತ್ತಾರೆಂದು ನುಡಿದು, ಇನ್ನುಳಿದ 1 ನೇ ಪ್ರತಿವಾದಿಯ ಮಕ್ಕಳು ಕ್ರಯ ಪತ್ರ ಮಾಡಿಕೊಳ್ಳುವ ಕಾಲಕ್ಕೆ ಸಹಿ ಮಾಡಿಕೊಡುತ್ತೇವೆಂದು ಹೇಳಿರುತ್ತಾರೆಂದು ನುಡಿಯುತ್ತಾರೆ. ಕ್ರಯ ಕರಾರು ಪತ್ರದಲ್ಲಿ ಪ್ರತಿವಾದಿ 1 ರವರ ಎಲ್ಲಾ ಮಕ್ಕಳ ಸಹಿಗಳನ್ನು ಕ್ರಯ ಪತ್ರ ಮಾಡಿಕೊಳ್ಳುವ ಕಾಲಕ್ಕೆ ಮಾಡಿಸಿಕೊಡುತ್ತೇವೆಂದು ನಮೂದು ಇದೆಯಾ ಎಂದು ಕೇಳಲಾಗಿ ಸಾಕ್ಷಿಯು ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಇರುವುದರಿಂದ ಅವರ ಮಕ್ಕಳುಗಳ ಸಹಿ ಅಗತ್ಯ ಇಲ್ಲ, ಬೇಕಾದರೆ ಕ್ರಯ ಪತ್ರ ಮಾಡಿಕೊಳ್ಳುವ ಕಾಲಕ್ಕೆ ನನ್ನ ಎಲ್ಲಾ ಮಕ್ಕಳ ಸಹಿ

ಮಾಡಿಸಿಕೊಡುತ್ತೇನೆಂದು 1 ನೇ ಪ್ರತಿವಾದಿ ಹೇಳಿದ್ದರು ಎಂದು ನುಡಿಯುತ್ತಾರೆ. ಕ್ರಯ ಕರಾರು ಪತ್ರದಲ್ಲಿ ಎಷ್ಟು ವರ್ಷ ವಾಯಿದ್ದೆಗಳಲ್ಲಿ ಕ್ರಯ ಪತ್ರ ಬರೆದುಕೊಡುತ್ತೇವೆಂದು ಬರೆದಿರುತ್ತಾರೆಂದರೆ ಸಾಕ್ಷಿಯು ನಿರ್ದಿಷ್ಟ ಸಮಯ ನಮೂದಿಸಿಲ್ಲ, ಬದಲಾಗಿ ದಾವಾ ಆಸ್ತಿಯ ದಾಖಲಾತಿಗಳನ್ನು ಒದಗಿಸಿದ ನಂತರ ಕ್ರಯ ಪತ್ರ ಮಾಡಿಕೊಳ್ಳುವುದೆಂದು ಮಾತುಕತೆಯಾಗಿರುತ್ತದೆಂದು ನುಡಿಯುತ್ತಾರೆ. ನಿ.ಪಿ.-1 ಕ್ರಯ ಕರಾರು ಪತ್ರ 2012 ನೇ ಇಸವಿಯಲ್ಲಿ ತಯಾರು ಮಾಡಲಾಗಿರುತ್ತದೆಂದರೆ ಸರಿ. 2016 ರ ಮೊದಲು ಪ್ರತಿವಾದಿಯರಿಗೆ ನೋಟೀಸ್ ಮೂಲಕ ದಾಖಲಾತಿಗಳು ಲಭ್ಯವಿದೆಯಾ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಮೌಖಿಕವಾಗಿ ಕೇಳಿರುತ್ತೇವೆಂದು ನುಡಿಯುತ್ತಾರೆ. ಕ್ರಯ ಕರಾರು ಪತ್ರವನ್ನು ಹಣದ ಭದ್ರತೆಗಾಗಿ ಮಾಡಿಕೊಟ್ಟಿರುವುದರಿಂದ 03 ವರ್ಷಗಳವರೆಗು ನಾನು ಯಾವುದೇ ನೋಟೀಸ್ ಕೊಟ್ಟಿಲ್ಲವೆಂದರೆ ಸರಿಯಲ್ಲ. ರೂ. 2,00,000/- ಮೊತ್ತಕ್ಕೆ ಪ್ರತಿವಾದಿಯರು ಬಡ್ಡಿ ಕೊಡುತ್ತಾ ಬಂದಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರಿಂದ ಹಣ ವಸೂಲು ಮಾಡಲಾಗುವುದಿಲ್ಲವೆಂದು ತಿಳಿದು ಉದ್ದೇಶಪೂರ್ವಕವಾಗಿ ಪ್ರತಿವಾದಿಯರಿಗೆ ನೋಟೀಸ್ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯರು ಹಣ ಕೊಡದೇ ಇದ್ದುದಕ್ಕೆ ನಾನು ನ್ಯಾಯಾಲಯದಲ್ಲಿ ಕೇಸನ್ನು ದಾಖಲು ಮಾಡುತ್ತೇನೆ, ಹಣ ಕೊಟ್ಟ ನಂತರ ನಾನು ಕೇಸನ್ನು ಹಿಂಪಡೆಯುತ್ತೇನೆಂದು ಪ್ರತಿವಾದಿಯರಿಗೆ ಹೇಳಿರುತ್ತೇನೆಂದರೆ ಸರಿಯಲ್ಲ. ನಾನು ಹೀಗೆ ಹೇಳಿದ್ದರಿಂದ ಪ್ರತಿವಾದಿಯರು ಮರು ಉತ್ತರ ನೋಟೀಸ್ ನ್ನು ಕೊಟ್ಟಿಲ್ಲವೆಂದರೆ ಸರಿಯಲ್ಲ. ನನ್ನ ಮತ್ತು 2 ನೇ ಪ್ರತಿವಾದಿಯ ನಡುವೆ ಹಣಕಾಸಿನ ವ್ಯವಹಾರವಿದ್ದು, ಹಣದ

ಭದ್ರತೆಗಾಗಿ ನಿ.ಪಿ.-1 ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯರು ಈಗಲೂ ಅಸಲು ಹಣವನ್ನು ಬಡ್ಡಿ ಸಮೇತ ಕೊಡಲು ತಯಾರು ಇರುತ್ತಾರೆಂದರೆ ಸಾಕ್ಷಿಯು ನನಗೆ ಹಣ ಬೇಡ ಆಸ್ತಿ ಬೇಕೆಂದು ನುಡಿಯುತ್ತಾರೆ. ದಾವಾ ಆಸ್ತಿಯು ದುರಸ್ತ್ ಆಗದೇ ಇರುವುದರಿಂದ ಮತ್ತು ಸರ್ಕಾರದಿಂದ ಮಂಜೂರಾದ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇಲ್ಲದೇ ಇರುವುದರಿಂದ ನಿ.ಪಿ.-1 ಕ್ರಯದ ಕರಾರು ಪತ್ರ ಮಾಡಿಕೊಳ್ಳುವ ಸಂದರ್ಭವೇ ಉದ್ಭವಿಸುವುದಿಲ್ಲವೆಂದರೆ ಸರಿಯಲ್ಲ. ನಿ.ಪಿ.-1 ಕ್ರಯದ ಕರಾರು ಪತ್ರ ಮಾಡಿಕೊಳ್ಳು ಸಮಯದಲ್ಲಿ ದಾವಾ ಸ.ನಂ. ನಲ್ಲಿ 1.00 ಎಕರೆಗೆ ರೂ. 15,00,000/- ಇದ್ದು, ಈಗ ಅದು ರೂ. 45,00,000/- ಆಗಿರುತ್ತದೆಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಸೇರಿದ ಮನೆ ಎಸ್.ಬಿ.ಎಂ. / ಎಸ್.ಬಿ.ಐ. ಬ್ಯಾಂಕಿನಿಂದ ಹರಾಜಿಗೆ ಬಂದಿದ್ದರಿಂದ 2 ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದುದರಿಂದ 2 ನೇ ಪ್ರತಿವಾದಿಯು ನನ್ನಿಂದ ರೂ. 2,00,000/- ಸಾಲದ ಮೂಲಕ ಪಡೆದು ನಿ.ಪಿ.-1 ಕರಾರು ಪತ್ರವನ್ನು ಸದರಿ ಸಾಲದ ಹಣದ ಭದ್ರತೆಗಾಗಿ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**